

ಪದೇ ಪದೇ ಕೇಳೋಳು... ನೀನು ನಿನ್ನ ಸಂತೋಷಕ್ಕಾಗಿ ಏನು ಬೇಕಾದರೂ ಮಾಡಬಹುದು ಅಂತಂದುಬಿಟ್ಟೆ. ಐ ಮೀನ್ ಮೆಸೇಜು ಕಳಿಸಿಬಿಟ್ಟೆ.... ನಿನ್ನ ಸಂತೋಷ ನಿನ್ನ ಹಕ್ಕು ಅಂತಂದೆ. ಅದೇ ನಾನು ಮಾಡಿದ ತಪ್ಪು... ಅದು ತಪ್ಪೂಂತ ಆಮೇಲೆ ಮನದಟ್ಟಾಯಿತು...'

'...?!'

'ಅದಕ್ಕೇನು ಬರೆದಳು ಗೊತ್ತಾ?!'

'....???!'

'ನಿನ್ನ ಸಲುವಾಗಿ ಈ ಮದುವೆ ಮುರಿದು ಹೊರಕ್ಕೆ ಬಂದರೆ, ನನ್ನನ್ನು ಮದುವೆ ಆಗುತೀಯಾ... ಅಂತ ನೇರ ಕೇಳಿಬಿಟ್ಟಳು!! ಹುಚ್ಚು ತಾನೆ?'

'.....!!!'

'ಸರಿ... ನಾನು ಹವ್ಯಾಳ ಬಗ್ಗೆ ಹೇಳಿದೆ. ಅವಳನ್ನ ಮದುವೆ ಆಗುತಿದೀನಿ ಅಂತಂದೆ... ಅವೊತ್ತಿನಿಂದ ನಿನ್ನ ಮಗಳು ಮಾತೇ ಬಿಟ್ಟುಬಿಟ್ಟಳು. ಐ ಮೀನ್ ಮೆಸೇಜ್ ಮಾಡೋದು ನಿಲ್ಲಿಸಿದಳು...'

'ಇದನ್ನೆಲ್ಲ ನೀನು ಮುಂಚೇನೇ ಯಾಕೆ ಹೇಳಲಿಲ್ಲ, ಅಲೇಕ್ಸ್? ಭಾರೀ ಫ್ರೆಂಡೂಂತೀಯಲ್ಲೋ?! ಥತ್...' ಅಳುವೊಡನೆ ಕೋಪವನ್ನೂ, ಒನ್ನಮೂನೆ ತಾತ್ಸಾರವನ್ನೂ ಮುಂದಾಗಿಸಿಕೊಂಡು ಕೇಳಿದೆ. ಕೇಳುತ್ತ ಬಿಕ್ಕಿ ಬಿಕ್ಕಿ ಅತ್ತುಬಿಟ್ಟೆ.

'ನಿನಗೆ ಬೇಜಾರಾಗುತ್ತೇಂತ ಹೇಳಲಿಲ್ಲ, ಸುಮೋದ್... ಅದೂ ಅಲ್ಲದೆ, ನೀನು ಅವಳ ತಾಯಿ... ಹೆತ್ತ ಅಮ್ಮ... ಹೀಗಿರುವಾಗ ಇವನ್ನೆಲ್ಲ ನಿರ್ಭಾವುಕವಾಗಿ ಸ್ವೀಕರಿಸುತ್ತಿದ್ದೆಯಾ?'

'....'

'ಹೇಳು, ಸುಮೋದ್... ನಿರ್ಭಾವುಕವಾಗಿ ಸ್ವೀಕರಿಸುತ್ತಿದ್ದೆಯಾ??'

★★★

ಉತ್ತರಿಸಲಾಗಲಿಲ್ಲ. ಉತ್ತರವೇ ಇಲ್ಲದ ಆ ಹೊತ್ತಿನಲ್ಲಿ – ಆಶ್ಚರ್ಯಕ್ಕಿಂತ ದುಃಖವೂ, ದುಃಖವನ್ನು ಮೀರುವ ಆಶ್ಚರ್ಯವೂ ಒಮ್ಮೆಗೇ ಪೈಪೋಟಿಯಲ್ಲಿ ಘಟಿಸಿದವು. ಅಯ್ಯೋ... ಎದುರಿರುವ ಕೆರೆಯೇ... ಒಮ್ಮೆಗೇ ಹೊಮ್ಮಿ ಬಂದು ನನ್ನನ್ನು ನುಂಗಬಾರದೆ... ಎಂದೆಲ್ಲ ಒಳಗೇ ನನ್ನನಗೇ ಮೊರೆಯಿಟ್ಟೆ.

'ನಿನ್ನೆಯಲ್ಲ ಮೊನ್ನೆ ಇದ್ದಕ್ಕಿದ್ದಂತೆ ಐಕ್ಯಾ ಮತ್ತೆ ಮೆಸೇಜ್ ಮಾಡಿದಳು... ಹಾಯ್ ಹೆಲೋ ಹವ್ವಾರ್ಯು... ಗಳಾದವು... ಆಮೇಲಿನಿಂದ ವಿಷಯಕ್ಕಿಳಿದಳು. ನನ್ನ ಸಂತೋಷ ನನ್ನ ಹಕ್ಕು ಅಂದಿದ್ದೆಯಲ್ಲ, ಅಲಿ ಅಂಕಲ್.... ಈಗ ಹೇಳು, ಈಗಲೂ ಅದೇ ಮಾತು ಹೇಳುತೀಯಾ ಅಂತ ಕೇಳಿದಳು... ಹೆದರಿಕೆ ಆಯಿತು. ಇನ್ನೇನು ವಿಕೋಪವಾಗುತ್ತೋ ಅಂತ ಭಯವಾಯಿತು. ಉತ್ತರ ಬರೆಯದೆ ಸುಮ್ಮನಾದೆ... ಅವೊತ್ತು ಪೂರ್ತಿ, ಇದೇ ವಿಷಯವಾಗಿ ಪದೇ ಪದೇ ಮೆಸೇಜು